**ಸಾಕ್ಷಿಗೆ ದಿನಾಂಕ 10.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ಕೆ ಎಸ್ ವಕೀಲರಿಂದಃ**

**(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಮತ್ತು ತನ್ನ ಮಾತೃ ಭಾಷೆ ತೆಲುಗು ಎಂದು ಹೇಳಿದ ಕಾರಣ ಶ್ರೀ ಕೆ ಎನ್ ಎಸ್ ಕೆಎಆರ್ ನಂ.1055/2010 ವಕೀಲರನ್ನು ಅನುವಾದಕರನ್ನಾಗಿ ನೇಮಕ ಮಾಡಿ ಅವರ ಸಹಾಯದಿಂದ ಸಾಕ್ಷಿಗೆ ಪ್ರಶ್ನೆಯನ್ನು ಕೇಳಿರುತ್ತಾರೆ. ಸಾಕ್ಷಿ ನುಡಿದ ಉತ್ತರವನ್ನು ಯತಾವತ್ತಾಗಿ ಬೆರಳಚ್ಚು ಮಾಡಿಸಲಾಗಿರುತ್ತದೆ).**

1. ನಾನು ಹೋಗುತ್ತಿ ದ್ವಿಚಕ್ರ ವಾಹನ ನಮ್ಮ ಮೇಸ್ತ್ರಿಯಾದ ಸಲ್ಮಾನ್ ರದ್ದು ಆಗಿರುತ್ತದೆ. ಅಪಘಾತದ ದಿನ ನಾನು ಮತ್ತು ನನ್ನ ಸಹೋದ್ಯೋಗಿ ಅಫ್ಘಾನ್ ದ್ವಿಚಕ್ರ ವಾಹನದ ಮೇಲೆ ಹೋಗುತ್ತಿದ್ದೇವು. ಆಸಿಫ್ ಎನ್ನುವವರು ದ್ವಿಚಕ್ರ ವಾಹನದ ಮೇಲೆ ಇದ್ದರು ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಮೇಲೆ ಮೂರು ಜನ ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ಅಪಘಾತದ ದಿನ ಮನೆಯಿಂದ ಕೆಲಸಕ್ಕೆ ಹೋಗುತ್ತಿದ್ದೇವು. ಅಪಘಾತದ ರಸ್ತೆ ಯಾವುದು ಎಂದು ಗೊತ್ತಿಲ್ಲ. ಅಪಘಾತ ರಸ್ತೆಯ ಅಗಲದ ಬಗ್ಗೆ ಗೊತ್ತಿಲ್ಲ. ಅಪಘಾತವು 16.06.2023 ರಂದು ಆಗಿರುತ್ತದೆ. ಅಪಘಾತವು ನಾನು ಅತೀವೇಗವಾಗಿ ದ್ವಿಚಕ್ರ ವಾಹನವನ್ನು ಚಲಾಯಿಸಿದ್ದರಿಂದ ಆಗಿದೆ ಎಂದರೆ ಸರಿಯಲ್ಲ. ಒಂದನೇ ಎದುರುದಾರರ ವಾಹನದಿಂದ ನನಗೆ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

2. ಅಪಘಾತದ ಬಗ್ಗೆ ದೂರನ್ನು ನಮ್ಮ ಮೇಸ್ತ್ರಿಯಾದ ಸಲ್ಮಾನ್ ನೀಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಅಪಘಾತದ ನಂತರ ನನ್ನನ್ನು ಸಾರ್ವಜನಿಕರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯ ಹೆಸರು ಗೊತ್ತಿಲ್ಲ. ಪ್ರಥಮವಾಗಿ ಪಡೆದ ಚಿಕಿತ್ಸೆಯ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಕಳೆದುಹೋಗಿವೆ. ಸಿಂಗ್ ಆಸ್ಪತ್ರೆಗೆ ಮುಂದುವರೆದ ಚಿಕಿತ್ಸೆಗೆ ದಿಃ 03.08.2023 ರಂದು ದಾಖಲಾಗಿರುತ್ತೇನೆ ಎಂದರೆ ಸರಿ. ದಿಃ 03.08.2023 ಕ್ಕಿಂತ ಮುಂಚೆ ನಾನು ಪಡೆದ ಚಿಕಿತ್ಸೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ.8 ರಲ್ಲಿ ಏಪ್ರಿಲ್-2023 ರಲ್ಲಿ ಆದ ಗಾಯಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಿಪಿ.8 ರ ಹಿಂಬದಿ ಪುಟದಲ್ಲಿ 4-5 ತಿಂಗಳ ಹಿಂದೆ ಆದ ಗಾಯಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ.

3. ದಿಃ16.06.2023 ರಂದು ನನಗೆ ಯಾವುದೇ ಅಪಘಾತವಾಗಿಲ್ಲ, ಅದಕ್ಕಿಂತ ಮುಂಚೆ ನಾನು ಬೇರೆ ಕಾರಣಗಳಿಗೆ ಪಡೆದ ಚಿಕಿತ್ಸಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯಕೀಯ ದಾಖಲೆಗಳಲ್ಲಿ ರಸ್ತೆ ಅಪಘಾತದಿಂದಾದ ಗಾಯಗಳು ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ವಿಕ್ಟೋರಿಯಾ ಮತ್ತು ಸಿಂಗ್ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆ ಅಪಘಾತದಿಂದಾಗ ಗಾಯಗಳಿಗೆ ಪಡೆದ ಚಿಕಿತ್ಸೆಗಳಲ್ಲ ಎಂದರೆ ಸರಿಯಲ್ಲ. ಸಿಂಗ್ ಆಸ್ಪತ್ರೆಯಲ್ಲಿ ನನಗೆ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನಗೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ.

4. ನನ್ನ ವೈದ್ಯಕೀಯಕ್ಕೆ ಮತ್ತು ಇತರೆ ಖರ್ಚುಗಳಿಗೆ ರೂ.3,00,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆ ಮತ್ತು ಸಾರಿಗೆ ವೆಚ್ಚವಾಗಿ ರೂ.25,000/- ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.15 ಕ್ರಮ ಸಂಖ್ಯೆ 39 ರ ಬಿಲ್ಲು ಸೃಷ್ಟಿತ ಬಿಲ್ಲು ಎಂದರೆ ಸರಿಯಲ್ಲ. ನಾನು ಪೆಂಟರ್ ಕೆಲಸ ಮಾಡದೇ ಇದ್ದರೂ ಸಹ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ನನಗೆ 40 ವರ್ಷಕ್ಕಿಂತ ಜಾಸ್ತಿಯಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ಕಂಡಿಕೆ 13 ರಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ ರೂ.75,000/- ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನಗೆ ಆದ ಗಾಯಗಳು ಅಪಘಾತದಿಂದ ಆಗದೇ ಇದ್ದರೂ ಸಹ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದೂರು ನೀಡಿ, ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಒಂದನೇ ಎದುರುದಾರರ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು:** **1 ನೇ ಎದುರುದಾರರು ಏಕಪಕ್ಷೀಯ.**

**ಮರುವಿಚಾರಣೆ: ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಅನುವಾದಕರ ಸಹಾಯದಿಂದ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**